ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

(32)

ಇಲಾಖೆ / ವಿಷಯ : DEPARTMENT / SUBJECT: ಸಂಸತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 9/3/21

# ಬೆಲೆ ಬಿಸಿಗೆ ಕರಗಿದ ಕಲಾಪ

ನವದೆಹಲಿ: ಸಂಸತ್ತಿನ ಉಭಯ ಸದನಗಳ ಸೋಮವಾರದ ಕಲಾಪಗಳು ಇಂಧನ ಬೆಲೆ ಏರಿಕೆಯ ಬಿಸಿಯಲ್ಲಿ ಕರಗಿ ಹೋದವು. ಗಗನಕ್ಕೇರಿರುವ ಪೆಟ್ರೋಲ್, ಡೀಸೆಲ್ ಬೆಲೆ ನಿಯಂತ್ರಣ ಕುರಿತು ಚರ್ಚೆಗೆ ಅನುವು ಮಾಡಿಕೊಡಿ ಎಂದು ಆಗ್ರಹಿಸಿ ಪ್ರತಿಪಕ್ಷಗಳು 'ಗದ್ದಲ' ನಡೆಸಿದ್ದರಿಂದ ರಾಜ್ಯಸಭೆ ಮತ್ತು ಲೋಕಸಭೆ ಕಲಾಪಗಳು ಪ್ರಮುಖ ಯಾವುದೇ ಚರ್ಚೆ ಕಾಣದೇ ಮುಂದೂಡಿಕೆ ಯಾದವು.

ಇಂಧನ ಬೆಲೆ ದೇಶದ ಜನರನ್ನು ಕಂಗೆಡಿಸಿದೆ. ಪೆಟ್ರೋಲ್, ಡೀಸೆಲ್ ದರ ನಾಗಾಲೋಟದಲ್ಲಿವೆ. ಅಡುಗೆ ಅನಿಲ ಬೆಲೆ ಗ್ರಾಹಕರಿಗೆ ಸುಡುತ್ತಿದೆ. ಈ ಜ್ವಲಂತ ಸಮಸ್ಯೆ ಬಗ್ಗೆ ಮೊದಲು ಚರ್ಚೆ ನಡೆಸುವುದನ್ನು ಬಿಟ್ಟು ಉಳಿದ ಸಂಗತಿಗಳು ಯಾಕೆ ಬೇಕು? ವಿಷಯ ಚರ್ಚೆಗೆ ಅವಕಾಶ ನೀಡಿ ಎಂದು ರಾಜ್ಯಸಭೆಯಲ್ಲಿ ಪ್ರತಿಪಕ್ಷ ಸದಸ್ಯರು ದಿನದ ಕಲಾಪ ಆರಂಭಗೊಳ್ಳುತ್ತಿದ್ದಂತೆಯೇ ಆಗ್ರಹ ಮಂಡಿಸಿದರು. "ಬಜೆಟ್ ಮೇಲಿನ ಚರ್ಚೆಯ ಹಲವು ಮಹತ್ವದ ವಿಷಯಗಳು ಬಾಕಿ ಉಳಿದಿವೆ. ಮೊದಲು ಆ ಬಗ್ಗೆ ಚರ್ಚಿಸೋಣ. ನಂತರ ಬೆಲೆ ಏರಿಕೆ ಚರ್ಚೆಗೆ ಅನುವು ಮಾಡಿಕೊಡಲಾಗುವುದು," ಎಂದು ಸಭಾಪತಿ ಸಮಾಧಾನಪಡಿಸಲು ಯತ್ನಿಸಿದರು. ಆದರೆ ಇದಕ್ಕೆ ಕಿವಿಗೊಡದ ಪ್ರತಿಪಕ್ಷ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟಿಸಿದರು. ಗದ್ದಲ ನಿಯಂತ್ರಣಕ್ಕೆ ಬಾರದೇ ಹೋದಾಗ ಬೆಳಗಿನ ಕಲಾಪವನ್ನು 11 ಗಂಟೆಗೆ ಮುಂದೂಡಲಾಯಿತು. ಮತ್ತೆ ಸದನ ಸೇರಿದಾಗ ಅದೇ ರಾಗ ಮರುಕಳಿಸಿತು. ನಂತರ 1 ಗಂಟೆಗೆ, ಬಳಿಕ 1.15ಕ್ಕೆ, ಆ ಬಳಿಕ 1.30ಕ್ಕೆ ಹೀಗೆ ಹಲವು ಬಾರಿ ಮುಂದೂಡಲ್ಪಟ್ಟ ಸದನ ಅಂತಿಮವಾಗಿ ಮಂಗಳವಾರಕ್ಕೆ ಸಭಾಪತಿ ಪೀಠದಲ್ಲಿದ್ದ ವಂದನಾ ಚವಾಣ್ ದಾಟಿಸಿದರು.

ಕೆಳಮನೆಯಲ್ಲೂ ಅದೇ ಕಥೆ: ಲೋಕಸಭೆಯಲ್ಲೂ ಇಂಧನ ಬೆಲೆ ಏರಿಕೆ ಗದ್ದಲವು ದಿನದ ಕಲಾಪವನ್ನು ಬಲಿ ಪಡೆದುಕೊಂಡಿತು. ಸೋಮವಾರ ಸದನ ಸೇರುತ್ತಿದ್ದಂತೆಯೇ ಪ್ರತಿಪಕ್ಷಗಳು "ತೈಲ ಬೆಲೆ ಗಗನಮುಖಿ, ಏನು ಸ್ವಾಮಿ ಇದು ಅಧ್ವಾನ," ಎಂದು ಆಕ್ರೋಶ ವ್ಯಕ್ತಪಡಿಸಿದವು. ವಿಷಯ ಕುರಿತು ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಪಕ್ಷಗಳು ನಿಲುವಳಿ ಸೂಚನೆ ಮಂಡನೆಗೆ ಮುಂದಾದವು. ಆದಕ್ಕೆ ಅವಕಾಶ ನೀಡದ ಸ್ಪೀಕರ್ ಓಂ ಬಿರ್ಲಾ, "ನಿಲುವಳಿಗೆ ಸಂಬಂಧಿಸಿ ಈಗ ಅವಕಾಶ ಇಲ್ಲ, ಪ್ರಮುಖ ವಿಷಯಗಳು ಮುಗಿದ ಬಳಿಕ ನೋಡೋಣ, ಸುಮ್ಮನಿರಿ," ಎಂದು ಸಮಾಧಾನ ಪಡಿಸಿದರು. ಆದಕ್ಕೆ ಬೆಲೆ ಕೊಡದೇ ಪ್ರತಿಪಕ್ಷಗಳು ಗದ್ದಲ ಮುಂದುವರಿಸಿದಾಗ ಸದನ ಹಲವು ಬಾರಿ ಮುಂದೂಡಿಕೆಯಾಯಿತು. ಕೊನೆಗೆ ಮಂಗಳವಾರ ಸಂಜೆ 7ಕ್ಕೆ ಮುಂದೂಡಲಾಯಿತು.



ಇಂಧನ ಬೆಲೆ ಏರಿಕೆ ಕುರಿತು ಜನರಲ್ಲಿ ಆಕ್ರೋಶ ಮನೆ ಮಾಡಿದೆ. ಈ ವಿಷಯ ಕುರಿತು ಸದನದಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ನಾವು ಅವಕಾಶ ಕೇಳಿದೆವು. ಆದರೆ ಸರಕಾರಕ್ಕೆ ಈ ಬಗ್ಗೆ ಪ್ರಸ್ತಾಪಿಸಲು ಭೀತಿ ಕಾಡುತ್ತಿದೆ. ತಪ್ಪಿಸಿಕೊಳ್ಳಲು ಯತ್ನಿಸುತ್ತಿದೆ. ಆದರೂ ನಾವು ಬಿಡುವುದಿಲ್ಲ. ಸದನದ ಹೊರಗೂ ಬೆಲೆ ಏರಿಕೆ ವಿರುದ್ಧ ಹೋರಾಟ ಮುಂದುವರಿಸುತ್ತೇವೆ.

-ಮಲ್ಲಿಕಾರ್ಜುನ ಖರ್ಗೆ ರಾಜ್ಯಸಭೆ ಕಾಂಗ್ರೆಸ್ ನಾಯಕ

**ಅಧಿವೇಶನ ಮೊಟಕು ಸಾಧ್ಯತೆ**

ಮಾರ್ಚ್ 27ರಿಂದ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಆರಂಭಗೊಳ್ಳುವ ಮೊದಲೇ ಸಂಸತ್ತಿನ ಹಾಲಿ ಬಜೆಟ್ ಅಧಿವೇಶನ ಅಂತ್ಯಗೊಳಿಸುವ ಸಾಧ್ಯತೆ ಇದೆ. ಎರಡನೇ ಹಂತದ ಬಜೆಟ್ ಅಧಿವೇಶನ ಏಪ್ರಿಲ್ 8ರವರೆಗೆ ನಿಗದಿಗೊಂಡಿದೆ. ಆದರೆ ಅದಕ್ಕೂ ಮುನ್ನ ಮಾರ್ಚ್ 27ರಿಂದ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಪುದುಚೆರಿ ಮತ್ತು ಕೇರಳ ವಿಧಾನಸಭೆಗಳಿಗೆ ಚುನಾವಣೆ ಶುರುವಾಗಲಿದೆ. "ಪ್ರಚಾರ ರ‍್ಯಾಲಿಗಳಲ್ಲಿ ಪಾಲ್ಗೊಳ್ಳಲು ತಮಗೆ ಕಾಲಾವಕಾಶ ಬೇಕಾಗುವುದರಿಂದ ಅಧಿವೇಶನವನ್ನು ಮೊಟಕುಗೊಳಿಸಿ," ಎಂದು ಹಲವು ಪಕ್ಷಗಳ ಮುಖಂಡರು ಸ್ಪೀಕರ್ ಬಳಿ ಮನವಿ ಮಾಡಿದ್ದಾರೆ. ಈ ಕುರಿತು ಸ್ಪೀಕರ್ ಶೀಘ್ರವೇ ಪೂರಕ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.